ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೨೦ನೇ ಮಾರ್ಚ್ ೧೯೮೪ ಫಾಲ್ಗುಣ ೩೦, ಶಕ ೧೯೦೫

ವಿಧಾನಸೌಧದಲ್ಲಿರುವ ವಿಧಾನ ಸಭೆಯಂ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡರು) ಪೀಠವನ್ನಲಂಕರಿಸಿದರು.]

Announcement

MR. SPEAKER.— There is one announcement. I have received the following message from the Chairman, Legislative Council as required under rule 114 of the Rules of Procedure and Conduct of Business:

> "I send he rewith the Karnataka Appropriation Bill No. 2 which has been agreed to by the Legislative Council on 16th March 1984 without recommendations".

ಲೋಕೋಪಯೋಗಿ ಇಲಾಖೆಯಲ್ಲಿನ ಹಳೆಯಂ ಹಾಗೂ ಉಪಯೋಗಿಸಲ್ಪಟ್ಟ ಟ್ರಕ್ಕುಗಳ ಹಾಗೂ ಇತರ ಯಂತ್ರೋಪಕರಣಗಳ ವಿಲೇವಾರಿ

ಶ್ರೀ ಎಚ್.ಕೆ. ಶ್ರೀ ಲಕ್ಷ್ಮಯ್ಯ (ಬೀರೂರು).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಟಿಡ ಪೋರ್ಡ್ ಡಾಡ್ಜ್ ಮತ್ತು ಇತರ ಕಂಪನಿಗಳ ಕೆಟ್ಟ ಟ್ರಕ್ಕುಗಳು ಲಾರಿಗಳು ಮತ್ತು ಇತರ ಯಂತ್ರಗಳಂ ಲೋಕೋಪಯೋಗಿ ಇಲಾಖೆಯಲ್ಲಿರುವುದು ಸತ್ಯಾಂಶದ ವಿಚಾರವ ಲ್ಲವೇ ?

ಆ) ಆಗಿದ್ದ ಪಕ್ಷದಲ್ಲಿ ಅವುಗಳನ್ನು ವಿಲೇವಾರಿ ಮಾಡಿ ಹೊಸದನ್ನು ಕೊಂಡುಕೊಳ್ಳಲು ತೆಗೆದು ಕೊಂಡಿರುವ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು.).—

ಅ) ಹೌದು.

ಆ) ಈ ವಲಯ ಕಾರ್ಯನಿರ್ವಾಹಕ ಅಭಿಯಂತರವರುಗಳಿಗೆ ನಿರುಪಯುಂಕ್ತವಾದ ವಾಹನಗಳನ್ನು ಬೆಂಗಳೂರಿನ ಯಾಂತ್ರಿಕ ಮುಖ್ಯ ಇಂಜಿನಿಯರ್ ಪರಿಶೀಲನೆಗಾಗಿ ಒಳಪಡಿಸಿ ರಿವೇರಿ ಅಥವಾ ನಿಷ್ಪ್ರಯೋಜಕ ಸರ್ಟಿಫಿಕೇಟುಗಳನ್ನು ಪಡೆದು ನಿಷ್ಪ್ರಯೋಜನವಾದುವುಗಳನ್ನು ಹರಾಜಿನ ಮೂಲಕ ವಿಲೇವಾರಿ ಮಾಡಲು ಸೂಕ್ತ ಸಲಹೆಗಳನ್ನು ಕೊಡಲಾಗಿದೆ.

ನಿಷ್ಪ್ರಯೋಜಕ ವಾಹನಗಳ ಸರ್ವೆ ವರದಿಗಳನ್ನು ತತ್ಸಂಬಂಧವಾದ ಪ್ರಾಧಿಕಾರಿಗಳಿಂದ ಮಂಜೂರು ಮಾಡಿದ ಬಳಿಕ ಸ್ಥಳೀಯ ಅಧಿಕಾರಿಗಳಿಗೆ ವಾಹನಗಳ ಹರಾಜನ್ನು ಮಾಡಲು ಸಲಹೆಗಳನ್ನು ಕೊಡಲಾಗಿದೆ. ಆದರಂತೆ ಈಗಾಗಲೇ ೧೮ ಲಾರಿಗಳನ್ನು ಮತ್ತು ೧೦ ರೋಡ್ ರೋಲರ್ಸ್ ಕೊಳ್ಳಲು ಮಂಜೂರು ಮಾಡಲಾಗಿದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ಕೋಕೋಪಯೋಗಿ ಮತ್ತು ನಿರಾವರಿ ಇಲಾಖೆಯಲ್ಲಿರತಕ್ಕ ಮೆಷಿನರಿಗಳ ಒಟ್ಟು ಅಂದಾಜು ಮೊಬಲಗು ಎಷ್ಟು ? ಅದರಲ್ಲಿ ಉಪಯೋಗಕ್ಕೆ ಬರತಕ್ಕ ಮೆಷಿನರಿಗಳ ಅಂದಾಜು ಮೊಬಲಗು ಎಷ್ಟು ? ಮತ್ತು ಉಪಯೋಗಕ್ಕೆ ಬಾರದ ಮೆಷಿನರಿಗಳ ಅಂದಾಜು ಮೊಬಲಗು ಎಷ್ಟು ? ಉಪಯೋಗ ಇಲ್ಲದೆ ಇರತಕ್ಕ ಮೆಷಿನರಿಗಳಿಗೆ ಯಾರು ಜವಾಬ್ದಾರರು ? ಕೆಟ್ಟ ರತಕ್ಕ ಮೆಶನರಿಗಳ ರಿಪೇರಿಗೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳಲ್ಲಿರತಕ್ಕ ಮೆಷಿನರಿಗಳ ಒಟ್ಟು ಮೊಬಲಗು ೪೫ ಕೋಟಿ ರೂಪಾಯಿಗಳು ಆಗಬಹುದೆಂದು ಅಭಿಪ್ರಾಯ ಇದೆ. ಹಿಂದೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಸುಮಾರು ೧೦೦ ಕೋಟಿ ರೂಪಾಯಿ ಆಗ ಬಹುದೆಂದು ವರದಿ ಕೊಟ್ಟಿದ್ದಾರೆ. ಇವತ್ತು ನಮ್ಮ ಅಂದಾಜು ೪೫ ಕೋಟಿ ರೂಪಾಯಿ ಆಗಬಹುದೆಂದು ಇದೆ. ಇದರಲ್ಲಿ ಉಪಯೋಗಕ್ಕೆ ಬರತಕ್ಕದ್ದು ೩೬ ಕೋಟಿ ರೂಪಾಯಿಗಳ ಮೆಷಿನರಿ ಇದೆ. ಉಳಿದ ೯ ಕೋಟಿ ರೂಪಾಯಿಗಳದ್ದು ಉಪಯೋಗಕ್ಕೆ ಬಾರದ್ದು. ಇದರಲ್ಲಿ ಎರಡು ಕ್ಯಾಟಗರಿ ಮಾಡಿದ್ದೇವೆ. ಚಿಕ್ಕ ಮೆಷಿನರಿಗಳನ್ನು ರಿಪೇರಿ ಮಾಡಿಕೊಂಡರೆ ಉಪಯೋಗ ಮಾಡಬಹುದು. ಈಗಾಗಲೇ ೮.೫ ಕೋಟಿ ರೂಪಾಯಿಗಳಷ್ಟು ಮೆಷಿನರಿಗಳನ್ನು ರಿಪೇರಿ ಮಾಡಿಕೊಂಡರೆ ಉಪಯೋಗ ಮಾಡಲಿಕ್ಕೆ ಸಾಧ್ಯವಿದೆ ಎಂದು ವರದಿ ಬಂದಿದೆ. ಉಳಿದ ೫೦ ಲಕ್ಷ ರೂಪಾಯಿಂಗಳ ಮೆಷಿನರಿಯನ್ನು ಹರಾಜು ಮಾಡಬೇಕಾಗುತ್ತದೆ. ಅಥವಾ ಗುಜರಿಗೆ ಕಳುಹಿಸಬೇಕಾಗುತ್ತದೆ. ಅದಕ್ಕೆ ಒಂದು ಕೋಟಿ ರೂಪಾಯಿಗೆ ಈ ಸಾರಿ ಮಂಜೂರಾತಿ ಕೊಟ್ಟಿದೆ. ಎಂಟೂವರೆ ಕೋಟಿರೂಪಾಯಿನ ಮೆಷಿನರಿಗಳನ್ನು ಉಪಯೋಗ ಮಾಡುವಂತೆ, ರಿಪೇರಿ ಮಾಡುವುದಕ್ಕೆ ಒಂದು ಕೋಟಿರೂಪಾಯಿಗಳನ್ನು ಕೊಟ್ಟಿದ್ದೇವೆ. ಅವುಗಳನ್ನು ರಿಪೇರಿ ಮಾಡಿಸಿ ಉಪಯೋಗವನ್ನು ಪಡೆದುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನಪಡುತ್ತದೆ. ಇದರ ಜೊತೆಗೆ ೩೬ ಕೋಟಿ ರೂಪಾಯಿಗಳ ಉಪಯೋಗಕ್ಕೆ ಬರುವ ಮೆಷಿನರಿಗಳೇನಿವೆ ಅದರಲ್ಲಿ ೭ಕೋಟಿ ರೂಪಾಯಿಗಳ ಮೆಷಿನರಿಗಳನ್ನು ನಾವು ಉಪಯೋಗ ವನ್ನೇ ಮಾಡುತ್ತಿಲ್ಲ. ಇರಿಗೇಷನ್ ಪ್ರಾಜೆಕ್ಟಿನಲ್ಲಿ ಅದನ್ನು ತೆಗೆದುಕೊಂಡಿದ್ದಾರೆ. ಅದು ಉಪಯೋಗವಾಗದೆ ಹಾಗೇ ಬಿದ್ದಿದೆ. ಅದು ಸರ್ವೀಸಬಲ್ ಕಂಡೀಷನ್‌ನಲ್ಲಿದ್ದರೂ ಕೂಡ ಉಪಯೋಗ ಮಾಡುವುದಕ್ಕಾಗಿಲ್ಲ. ಏಕೆಂದರೆ ಅದನ್ನು ಉಪಯೋಗ ಮಾಡುವ ಅವಕಾಶ ನಮ್ಮ ಪ್ರಾಜೆಕ್ಟಿನಲ್ಲಿ ಬರುವುದಿಲ್ಲ. ಹೀಗಾಗಿ ೭ಕೋಟಿ ರೂಪಾಯಿಗಳ ಮೆಷಿನರಿಗಳು ಹಾಗೇ ಬಿದ್ದಿದೆ. ಆದರೆ ಅದನ್ನು ಹೊರಗಡೆಯವರು ಬಾಡಿಗೆಯ ಮೇಲೆ ಕೊಡಿ ಎಂದು ಅರ್ಜಿ ಕೊಟ್ಟರು. ಆದರೆ ಅದಕ್ಕೂ ತಕರಾರು ಇದೆ. ಹೊರಗಡೆಯವರಿಗಾಗಲೀ ಪಕ್ಕದ ರಾಜ್ಯಗಳಿಗಾಗಲೀ ಕೊಡುವುದಕ್ಕೆ ಕಾನೂನಿನಲ್ಲಿ ಕೆಲವು ತೊಡಕುಗಳಿವೆ. ಇದನ್ನು ಹೇಗೆ ಮಾಡಬೇಕು ಎಂಬ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಕಾಮಗಾರಿ ಕಾರ್ಯಗಳಿಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲದಂಥ ಸಂದರ್ಭದಲ್ಲಿ ಅದನ್ನು ಡಿಫೆನ್ಸ್ ಡಿಪಾರ್ಟ್‌ಮೆಂಟಿಗೋ, ಸೆಂಟ್ರಲ್ ಗವರ್ನಮೆಂಟ್ ಕಂಟ್ರಾಕ್ಟರುಗಳಿಗೂ ಬೇರೆಯವರಿಗೋ ಕೊಡುವುದಕ್ಕೆ ಅವಕಾಶವಾಗುವಂತೆ ರೂಲ್ಸ್ ಫ್ರೇಂ ಮಾಡುತ್ತಿದ್ದೇವೆ. ಈಗ ಈ ಮೆಷಿನರಿಗಳಿಂದ ಏನೇನು ಉಪಯೋಗವಾಗುತ್ತಿಲ್ಲ. ಸುಮ್ಮನೆ ಅದು ನಮಗೆ ಬರ್ಡನ್ ಆಗಿದೆ. ಎಂಟೂವರೆ ಕೋಟಿ ರೂಪಾಯಿ ಬೆಲೆ ಬಾಳುವ ಸಿಕ್ ಆಗಿರುವ ಮೆಷಿನರಿಗಳನ್ನು ರಿಪೇರಿ ಮಾಡುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತೆ ರೋಡ್ ರೋಲರ್‌ಗಳು ಮತ್ತು ಟಿಪ್ಲರ್‌ಗಳನ್ನು ಹೊಸದಾಗಿ ಕೊಂಡುಕೊಳ್ಳುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಕೋಟ್ಯಾಂತರ ರೂಪಾಯಿಯ ವ್ಯವಹಾರ ಅಲ್ಲಿ ನಡೆಯುತ್ತಿದೆ. ಆದ್ದರಿಂದ ಮೆಕಾನಿಕಲ್ ಹುದ್ದೆಗೆ ಯಾರಾದರೂ ಸರಿಯಾದ ಅಧಿಕಾರಿಗಳನ್ನು ನೇಮಿಸಲಾಗಿದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.— ಇದಕ್ಕೆ ಪ್ರತ್ಯೇಕವಾಗಿ ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನ್ ಎಂಬ ಒಂದು ಸಂಸ್ಥೆಯನ್ನೇ ಕ್ರಿಯೇಟ್ ಮಾಡಿ ಮೆಕಾನಿಕಲ್ ಚೀಫ್ ಇಂಜಿನಿಯರ್ ಎಂಬ ಹೊಸ ಹುದ್ದೆಯನ್ನು ನಿರ್ಮಾಣ ಮಾಡಿದ್ದೇವೆ. ಈಗಾಗಲೇ ಪೋಸ್ಟಿಂಗ್ ಕೂಡ ಮಾಡಿದ್ದೇವೆ. ಇದು ಬಹಳ ದಿನದ ಬೇಡಿಕೆಯಾಗಿತ್ತು. ನಾನು ಆ ಕಡೆ ಕಾಳಿತಾಗ ಕೂಡ ವಾದ ಮಾಡಿಕೊಂಡು ಬಂದಿದ್ದೆ. ಯಾವ ರೀತಿ ಮಾರ್ಗದರ್ಶನ ಮಾಡಬೇಕು ಎಂಬ ಬಗ್ಗೆ ಸೆಕ್ರೆಟರಿಯವರ ಮುಖಂಡತ್ವದಲ್ಲಿ ಕಮಿಟಿ ಮಾಡಿದ್ದೇವೆ. ಮೆಷಿನರಿಗಳನ್ನು ಯಾವರೀತಿ ಉಪಯೋಗ ಮಾಡಬೇಕು. ಅದಕ್ಕೆ ಮೈಂಟೆನೆನ್ ಹೇಗೆ ಮಾಡಬೇಕು. ಕ್ಯಾಪಿಟಲ್ ಕಾಸ್ಟ್ ಎಷ್ಟಾಗುತ್ತದೆ, ಇದರ ಉಪಯುಕ್ತತೆಯನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆ ಅವರು ಮಾರ್ಗದರ್ಶನ ನೀಡುತ್ತಾರೆ. ಮೆಶಿನರೀಸ್ ಯಾವುದು ಉಪಯೋಗವಾಗುತ್ತದೆ, ಸರ್‌ಪ್ಲಸ್ ಎಲ್ಲಿದೆ ಈ ಎಲ್ಲ ವಿವರಗಳು ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನ್‌ನಲ್ಲಿ ಇರಬೇಕು ಎಂದು ಮಾಡಿದ್ದೇವೆ. He must maination the bio-date of the requirements of the vehicles. ಒಂದು ಸಣ್ಣ ಉದಾಹರಣೆ ಹೇಳುವುದಾದರೆ, ಒಂದು ತಿಂಗಳಲ್ಲಿ ಒಂದು ಟಿಪ್ಪರ್ ಎಷ್ಟು ಉಪಯೋಗ ಆಗಿದೆ ಎಂಬುದನ್ನು ಲಾಗ್ ಬುಕ್‌ನಲ್ಲಿ ನೋಡಿದೆ ೩೦ ದಿನಗಳಲ್ಲಿ ೩ದಿನ ಮಾತ್ರ ಉಪಯೋಗ ಮಾಡಿರುವುದು ಅದರಲ್ಲಿ ಕಂಡು ಬಂತು. ಅಂದರೆ ಇದರಿಂದ ಎಷ್ಟು ಕೊಲೋಸಲ್ ವೇಸ್ಟ್ ಆಗುತ್ತಿದೆ ಎಂಬುದು ಗೊತ್ತಾಗುತ್ತದೆ. ಇದರ ಬಗ್ಗೆ ಸರ್ಕಾರ ಆಸ್ಥೆ ವಹಿಸಿ ಒಂದು ತಿಂಗಳಲ್ಲಿ ಕನಿಷ್ಠಪಕ್ಷ ೧೫ ದಿನಗಳಾದರೂ ಒಂದು ಟಿಪ್ಪರ್ ಸರ್ವೀಸ್ ಕೊಡಲೇಬೇಕು ಎಂದೂ ಮಾಡಿದ್ದೇವೆ. ಒಂದು ತಿಂಗಳಲ್ಲಿ ಕೇವಲ ಮೂರು ದಿವಸಗಳು ಉಪಯೋಗ ಮಾಡಿದರೆ ಎಷ್ಟು ನಷ್ಟವಾಗುತ್ತದೆ, ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ಟಿಪ್ಪರ್‌ನಿಂದ ಈ ರೀತಿ ಪ್ರಯೋಜನ ಪಡೆದರೆ ಹೇಗೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ We have taken utmost care and I wanted to bring efficiency even in the mechanical organisation by appointing a Chief Engineer (Mechanical). I assure that the mechanical organisation will be asked to utlise all the machineries and proper retuns and alll the aspects will be taken into consideration. We are going to give guidelines to them.

ಶ್ರೀ ಬಿ. ದೊಡ್ಡ ಬೋರೇಗೌಡ.— ಮಾನ್ಯ ಅಧ್ಯಕ್ಷರೆ, ಸುಮಾರು ೩೬ ಕೋಟಿ ರೂಪಾಯಿಗಳ ಮೆಷಿನರೀಸ್ ಸಣ್ಣ ಪುಟ್ಟ ರಿಪೇರಿಯಾಗದೆ ಉಪಯೋಗವಾಗುತ್ತಿಲ್ಲ ಎಂಬ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಇದು ಎಷ್ಟು ವರ್ಷಗಳಿಂದ ಸಣ್ಣ ಪುಟ್ಟ ರಿಪೇರಿಯಾಗದೆ ಉಳಿದಿದೆ ? ಹೊಸದಾಗಿ ಮೆಷಿನರಿಗಳನ್ನು ಯಾವಾಗ ಕೊಂಡುಕೊಂಡರು ? ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.— ನಾವು ಇನ್ನೂ ಕೊಂಡುಕೊಂಡಿಲ್ಲ. ೪೬ ಕೋಟಿ ರೂಪಾಯಿ ಮೆಷಿನರಿಗಳಲ್ಲಿ ೩೬ ಕೋಟಿ ರೂಪಾಯಿ ಬೆಲೆ ಬಾಳುವ ಮೆಷಿನರಿಗಳು ಉಪಯೋಗಕ್ಕೆ ಬರುವಂಥದ್ದಿದೆ ಎಂದು ಹೇಳಿದ್ದೇನೆ. ೮.೫ ಕೋಟಿ ರೂಪಾಯಿಗಳ ಮೆಷಿನರಿಗಳು ಸಿಕ್ ಇದೆ. ಇದರ ರಿಪೇರಿಗೆ ಹಣ ಒದಗಿಸಿದ್ದೇವೆ. ಟಿಪ್ಪರ್ಸ್ ಮತ್ತು ರೋಡ್‌ರೋಲರ್‌ಗಳನ್ನು ಕೊಳ್ಳುವುದಕ್ಕೆ ಒಂದು ಕೋಟಿ ರೂಪಾಯಿ ಮಂಜೂರು ಮಾಡಿದ್ದೇವೆ. ಇನ್ನೂ ಪರ್ಚೇಸ್ ಮಾಡಿಲ್ಲ. ಸಿಕ್ ಮೆಷನರಿಗಳನ್ನು ಯಾವಾಗ ಕೊಂಡುಕೊಳ್ಳಲಾಯಿತು ಎಂಬುದನ್ನು ಪತ್ತೆ ಹಚ್ಚುವುದು ಕಷ್ಟ. ಇದು ಕೃಷ್ಣ ರಾಜೇಂದ್ರ ಒಡೆಯರ್ ಕಾಲದಲ್ಲಿ ಕೊಂಡಿದೆಯೋ ಅಥವಾ ಯಾವಾಗ ಕೊಂಡುಕೊಳ್ಳಲಾಗಿದೆಯೇ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟ. ರಿಜಿಸ್ಟರ್ ಕೂಡ ಸಿಗುವುದಿಲ್ಲ. ಆಫೀಸ್ ನೋಡಿದರೆ ಶಿವಾಜಿನಗರದಲ್ಲಿ ಗುಜರಿ ಇದ್ದಹಾಗಿದೆ. ನಾನು ಅದನ್ನು ಸರಿಯಾಗಿ ಇಡುವಂತೆ ಬೈದು ಬಂದಿದ್ದೇನೆ. I have told them to keep the PWD buildings clean.

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ಡಾಡ್ಜ್, ಬೆಡ್‌ಫೋರ್ಡ್ ಕಂಪೆನಿಗಳು ಬ್ರಿಟಿಷರ ಕಾಲದಲ್ಲಿ ಪ್ರಾರಂಭವಾದದ್ದು. ಲೋಕೋಪಯೋಗಿ ಇಲಾಖೆಯವರು ಈ ಕಂಪೆನಿಯವರನ್ನು ಬದುಕಿಸುವುದ ಕ್ಕೋಸ್ಕರವಾಗಿ ಈ ವಾಹನಗಳನ್ನು ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಈ ವಾಹನಗಳಿಂ ೭ಕಿಲೋಮೀಟರ್ ಕೊಡುವಕಡೆ ೩ ಕಿ. ಮೀಟರ್ ಕೊಡುತ್ತಿವೆ. ಇದರಲ್ಲಿ ಹಣ ಸಾಕಷ್ಟು ಹಾಳಾಗುತ್ತಿದೆ.

ಈಗ ಆಧುನೀಕರಣಗೊಳಿಸಿದ ಯಂತ್ರಗಳು ಇರುವಾಗಲೂ ಹಳೆಯ ಕಾಲದ್ದನ್ನು ಏತಕ್ಕೆ ಇಟ್ಟುಕೊಂಡಿರ ಬೇಕು ? ಈ ಕಂಪೆನಿಯವರನ್ನು ಉದ್ಧಾರ ಮಾಡುವುದಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಇದರಿಂದ ಇಲಾ ಖೆಗೆ ನಷ್ಟವಾಗುತ್ತಿದೆ. ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ತಮ್ಮ ಕಾಲದಲ್ಲಾದರೂ ದಿಟ ಹೆಜ್ಜೆ ಇಟ್ಟು ಟೆಡ್‌ಫೋರ್ಡ್ ಮತ್ತು ಡಾಡ್ಜ್ ಕಂಪೆನಿಯ ಮೆಷಿನರಿಗಳನ್ನು ಹರಾಜು ಮಾಡಿ ಹೊಸ ಯಂತ್ರೋಪಕರಣಗಳನ್ನು ಅಳವಡಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಚ್ ಡಿ. ದೇವೇಗೌಡ.— ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ,

ಸೌಡಿ ಪೌಟಕರಿ ಕಾರ್ಮಿಕರ ಸೇವಾ ವಿವರಗಳ ಬಗ್ಗೆ

೧೬೫೨. ಶ್ರೀ ಎಂ.ಎಸ್. ಕೃಷ್ಣನ್.(ರಾಜಾಜಿನಗರ)ವಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳಲ್ಲಿ ಎಷ್ಟು ಜನ ಸೌಡಿ ಪೌಟಕರಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಆ) ತುಕೋಳ್ ಆಯೋಗದ ವರದಿಯಲ್ಲಿ ಅವರ ಹೆಸರನ್ನು ಏಕೆ ಬಿಡಲಾಗಿತ್ತು.

ಇ) ಅವರ ಹೆಸರನ್ನು ಸೇರಿಸಬೇಕಾಗಿತ್ತೆಂದೂ ಅವರಿಗೆ ೧-೧-೭೧ ರಿಂದ ತುಕೋಳ್ ಆಯೋಗದ ವರದಿ ಪ್ರಕಾರ ರೂ.೯೦ ರಿಂದ ೨೦೦ ರವರೆಗೆ ಸಂಬಳ ಕೊಡಬೇಕೆಂದು ರಾಜ್ಯ ಮುಖ್ಯ ನ್ಯಾಯಾಲಯ ತೀರ್ಪಿತ್ತಿದೆಯೇ?

ಈ) ಈ ತೀರ್ಪಿನ ವಿರುದ್ಧ ಸರ್ಕಾರ ರಾಷ್ಟ್ರದ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದೆಯೇ ಆ ಬಗ್ಗೆ ಉಚ್ಚ ನ್ಯಾಯಾಲಯದವರ ತೀರ್ಪೇನು?

ಉ) ಈ ಸೌಡಿ ಪೌಟಕರಿ ಕಾರ್ಮಿಕರಿಗೆ ದೊರಬೇಕಾದ ಸಂಬಳವನ್ನು ಎಂದು ಕೊಡ ಲಾಗುವುದು?

ಶ್ರೀ ಹೆಚ್.ಡಿ.ದೇವೇಗೌಡ.—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)

ಅ) ಲೋಕೋಪಯೋಗಿ ಮತ್ತು ನೀರಾವರಿ ಯೋಜನೆಗಳಲ್ಲಿ ೯೬ ಜನ ಸೌಡಿಗಳು ಮತ್ತು ೪೪ ಜನ ಪೌಟಕರಿ ಕಾರ್ಮಿಕರು ಪರ್ಕ್‌ಚಾರ್ಜ್ ಸಿಬ್ಬಂದಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಆ) ತುಕೋಳ್ ಆಯೋಗವು ಲೋಕೋಪಯೋಗಿ ಪರ್ಕ್‌ಚಾರ್ಜ್ ಸಿಬ್ಬಂದಿಯವರ ಪರಿಷ್ಕರಣದ ಬಗ್ಗೆ ಯಾವುದೇ ರೀತಿಯ ಸಲಹೆಗಳನ್ನು ಕೊಟ್ಟಿರುವುದಿಲ್ಲ. ಈ ನೌಕರರನ್ನು ಖಾಯಂ ನೌಕರರಂತೆ ಪರಿಗಣಿಸಲು ಸಾಧ್ಯವಿಲ್ಲವಾದ್ದರಿಂದ ಆಯೋಗವು ವೇತನ ಪರಿಷ್ಕರಣದ ಬಗ್ಗೆ ಯಾವುದೇ ಸಲಹೆಯನ್ನು ಮಾಡಿರುವುದಿಲ್ಲುರೀತಿಯ

ಇ) ಇಲ್ಲ.

ರಾಜ್ಯದ ಶ್ರೇಷ್ಠ ನ್ಯಾಯಾಲಯವು ನೌಕರರ ವೈಯಕ್ತಿಕ ದಾವೆಯ ಆಧಾರದ ಮೇಲೆ ದಿನಾಂಕ. ೧-೧-೭೦ ಕ್ಕಿಂತ ಮೊದಲಿನ ಪೌಟಕರಿ ಸಿಬ್ಬಂದಿಗಳಿಗೆ ನಿಗದಿಪಡಿಸಿದ ವೇತನ ಶ್ರೇಣಿಯ ಬಗ್ಗೆ ಆದೇಶ ನೀಡಿರುತ್ತದೆ. ಮತ್ತೊಮ್ಮೆ ಆ ಆದೇಶದ ಆಧಾರದ ಮೇಲೆ ಪರ್ಕ್‌ಚಾರ್ಜ್ ಸಿಬ್ಬಂದಿಯವರಿಗೂ ಸಹಾ ವೇತನದಲ್ಲಿ ಸರಿಹೊಂದುವಂತೆ ಆದೇಶವನ್ನು ನೀಡಿರುತ್ತದೆ.

ಈ) ಹೌದು. ಈ ಬಗ್ಗೆ ರಾಷ್ಟ್ರದ ಉಚ್ಚ ನ್ಯಾಯಾಲಯದ ತೀರ್ಪನ್ನು ಕಾಯಂಲಾಗುತ್ತಿದೆ.

ಉ) ಸಧ್ಯದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ಎಸ್.ಕೃಷ್ಣನ್.— ತಾವು ಉತ್ತರದಲ್ಲಿ ೧೪೫ ಜನ ಸೌಡಿಗಳು ಮತ್ತು ಪೌಟಕರಿ ಗಳಿದ್ದಾರೆ ಎಂದು ಹೇಳಿದ್ದೀರಿ. ಇದರಲ್ಲಿ ಪರ್ಕ್‌ಚಾರ್ಜ್ ಸಿಬ್ಬಂದಿಯಲ್ಲಿ ಎಷ್ಟು ಜನರಿದ್ದಾರೆ ಮತ್ತು ಬೇರೆಯವರು ಎಷ್ಟು ಜನರಿದ್ದಾರೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?